not to be printed

2nd Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೯

೧೯೭೯ರಿಂದ ಇಲ್ಲಿಯವರೆಗೆ, ನೀನಾಸಮ್ ಸಂಸ್ಥೆಯು ಸತತವಾಗಿ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ ಮತ್ತು ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಪ್ರಸ್ತುತ ಕಾಲದ ಪ್ರಕ್ಷುಬ್ಧತೆಗಳು' ಎಂಬ ವಿಷಯವನ್ನು ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ. ಅರ್ಥಶಾಸ್ತ್ರದಿಂದ ಆರಂಭಿಸಿ ಸಮಾಜಜೀವನ ದವರೆಗೂ ಹಲವಾರು ಕ್ಷೇತ್ರಗಳಲ್ಲಿ ತುಂಬ ವ್ಯಾಪಕವಾಗಿ ಮತ್ತು ತೀವ್ರಗತಿಯಿಂದ ಸಂಭವಿಸುತ್ತಿರುವ ಇವತ್ತಿನ ಕಾಲದ ವಿದ್ಯಮಾನಗಳು ನಮ್ಮ ಬದುಕಿನ ವಿಭಿನ್ನ ವಲಯಗಳ ಮೇಲೆ ಮಾಡುತ್ತಿರುವ ಪರಿಣಾಮ ಯಾವ ಬಗೆಯದು ಮತ್ತು ಇವುಗಳಿಂದ ನಮ್ಮ ಸಮಾಜದಲ್ಲಿ ಆಗುತ್ತಿರುವ ಪಲ್ಲಟಗಳ ಬಗೆ ಎಂಥದು – ಎಂಬುದನ್ನು ತಾತ್ತ್ವಿಕವಾಗಿ ಮತ್ತು ನಿರ್ದಿಷ್ಟ ಕ್ಷೇತ್ರಗಳ ಉದಾಹರಣೆಗಳಲ್ಲಿ ಗುರುತಿಸುವುದು ಈ ಶಿಬಿರದ ಪ್ರಮುಖ ಕಾರ್ಯಸೂಚಿಯಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಶ್ರೀ ಮನು ಚಕ್ರವರ್ತಿ, ಶ್ರೀ ಸದಾನಂದ ಮೆನೋನ್, ಡಾ. ಗೋಪಾಲ ಗುರು, ಶ್ರೀ ನಾಗೇಶ ಹೆಗಡೆ, ಶ್ರೀಮತಿ ವೈದೇಹಿ ಮೊದಲಾದ ಗಣ್ಯರು ಈ ಉಪನ್ಯಾಸ-ಸಂವಾದಗಳನ್ನು ನಡೆಸಲಿದ್ದಾರೆ. ಅಲ್ಲದೆ, ಕಲೆ ಮತ್ತು ಸಮಾಜದ ವಿಭಿನ್ನ ಸ್ತರಗಳಲ್ಲಿ ವ್ಯಕ್ತವಾಗುತ್ತಿರುವ ಪ್ರಕ್ಷುಬ್ಧತೆಯ ಅನುಭವಗಳನ್ನು ಕುರಿತು ನಡೆಯಲಿರುವ ಚರ್ಚೆಗಳಲ್ಲಿ – ಶ್ರೀ ಸುಂದರ ಸಾರುಕ್ಕೈ, ಡಾ. ರಾಜೇಂದ್ರ ಚೆನ್ನಿ, ಡಾ. ಎಚ್.ಎಸ್. ವೆಂಕಟೇಶ ಮೂರ್ತಿ, ಡಾ. ಓ.ಎಲ್. ನಾಗಭೂಷಣ ಸ್ವಾಮಿ, ಶ್ರೀ ಅತುಲ್ ತಿವಾರಿ, ಶ್ರೀ ವಿವೇಕ ಶಾನಭಾಗ, ಶ್ರೀ ಅಶೋಕ ಹೆಗಡೆ, ಶ್ರೀ ಗುರುಪ್ರಸಾದ ಕಾಗಿನೆಲೆ, ಡಾ. ಎಂ.ಎಚ್. ಕೃಷ್ಣಯ್ಯ, ಶ್ರೀ ಜಯಂತ ಕಾಯ್ಕಿಣಿ, ಶ್ರೀ ಎಸ್. ದಿವಾಕರ್, ಶ್ರೀ ಎಸ್.ಆರ್. ವಿಜಯಶಂಕರ, ಪಂ। ಪರಮೇಶ್ವ ಹೆಗಡೆ – ಮೊದಲಾದವರು ಪಾಲ್ಗೊಳ್ಳಲಿದ್ದಾರೆ.

ಜತೆಗೆ, ಪ್ರತಿ ಶಿಬಿರಗಳಲ್ಲೂ ನಡೆಯುವಂತೆ, ತಿರುಗಾಟ ನಾಟಕಗಳ ಚರ್ಚೆಯೇ ಅಲ್ಲದೆ, ಕಾವ್ಯ-ಸಂಗೀತ-ನಾಟಕ-ಚಲನಚಿತ್ರ-ಛಾಯಾಚಿತ್ರ ರಸಗ್ರಹಣ ಕಾರ್ಯಕ್ರಮಗಳೂ ಕೂಡಾ ನಡೆಯಲಿವೆ. ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್, ಶ್ರೀ ಚನ್ನಕೇಶವ, ಶ್ರೀ ಚರಣ ಮೊದಲಾದವರು ಈ ಬಾರಿ ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ.

ಜತೆಗೆ, ಈ ದಿನಗಳಲ್ಲಿ, ಪ್ರತಿ ಸಂಜೆ ನಡೆಯುವ ಸಂಸ್ಕೃತಿ ಉತ್ಸವದ ಕಾರ್ಯಕ್ರಮಗಳ ಪಟ್ಟಿ ಮತ್ತು ಪರಿಚಯ ಮುಂದಿನ ಪುಟಗಳಲ್ಲಿದೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

## NINASAM CULTURE COURSE 2009

The Culture Course has been one of Ninasam's major annual events for the last two decades. Held over 7 days every October, The Course is designed around a specific theme, and organised as a combination of special lectures on the theme, lecture-demonstration-discussions on appreciation of art forms like literature, theatre, film, music, dance, and so on -- all this during the day-sessions, and a series of cultural programmes in the evenings. The evening festival this year consists of the following programmes:

- **4th October, Sunday:** Ninasam Tirugata Performance - ***Venissina Vyaapaara;*** Directed by Akshara K.V.
- **5th October, Monday:** Ninasam Tirugata Performance - ***Aakaashabheri;*** Directed by Sanjay Upadhyaya
- **6th October, Tuesday:** Ninasam Performance - ***Aakashabutti;*** Designed and directed by Raghunandana
- **7th October, Wednesday:** Karnatic Vocal Recital by **Vid. Hemmige S. Prashanth,** Bangalore; Karnatic Veena Recital by **Vid. Shubha Santosh,** Bangalore
- **8th October, Thursday:** Marathi Keertana and Natyasangeet by **Charudatta Aphale,** Pune
- **9th October, Friday:** Hindustani Vocal Recital by **Pt. Parameshwara Hegde,** Bangalore
- **10th October, Saturday:** Classical Dance Performance **Bharatanjali,** Nrityakalamandiram, Bangalore

**Ninasam, Heggodu, Sagara**
**Karnataka 577 417**

not to be
printed

Page 1

**ಅಕ್ಟೋಬರ್ ೪ ಭಾನುವಾರ**

photo to be printed here
see cd for the photo with this file no.

**04CC09**

ತಿರುಗಾಟ ನಾಟಕ

## ವೆನಿಸ್ಸಿನ ವ್ಯಾಪಾರ

ಶೇಕ್ಸ್ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ಆಧಾರಿತ

**ಕನ್ನಡ ರೂಪ ಮತ್ತು ನಿರ್ದೇಶನ: ಅಕ್ಷರ ಕೆ.ವಿ.**

ಜಗತ್‌ಪ್ರಸಿದ್ಧ ನಾಟಕಕಾರ ಶೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ಕೃತಿಯನ್ನು ಆಧರಿಸಿ ಅಕ್ಷರ ಕೆ.ವಿ. ಅವರೇ ಸಿದ್ಧಪಡಿಸಿದ ಕನ್ನಡ ರೂಪ ಈ ನಾಟಕ. ವ್ಯಾಪಾರ, ಸಂಪತ್ತು ಮತ್ತು ಉದ್ಯಮಶೀಲತೆಗಳ ಹೊಸ ಯುಗವೊಂದರ ಹೊಸ್ತಿಲ ಮೇಲೆ ನಿಂತಿರುವ ೧೬ನೆಯ ಶತಮಾನದ ವೆನಿಸ್ ನಗರವನ್ನು ಕೇಂದ್ರವಾಗಿಟ್ಟುಕೊಂಡು ನಡೆಯುವ ನಾಟಕ ಇದು. ಎರಡು ಕಥೆಗಳು ಈ ನಾಟಕದಲ್ಲಿ ಸಮಾನಾಂತರವಾಗಿ ನಡೆಯುತ್ತ ಅಂತಿಮವಾಗಿ ನಾಟಕೀಯ ಉತ್ತುಂಗದಲ್ಲಿ ಬೆಸೆದುಕೊಳ್ಳುತ್ತವೆ – ಮೊದಲನೆಯದು ಜುಗಾರಿಯ ಆಯ್ಕೆಯ ಮೂಲಕ ನಡೆಯುತ್ತಿರುವ ಒಂದು 'ಸ್ವಯಂವರ'ದ ಕಥೆ; ಇನ್ನೊಂದು ನೇರವಾಗಿ ಹಣದ ಜುಗಾರಿಗೇ ಕೈಹಚ್ಚಿ ನಡೆಸಲಾಗುತ್ತಿರುವ ಖಂಡಾಂತರ ವ್ಯಾಪಾರದ ಸಾಲಸೋಲಗಳ ಕಥೆ. ಈ ಎರಡು ಕಥನಗಳ ಮೂಲಕ ಹಲವು ಬಗೆಯ ಸಂಘರ್ಷಗಳೂ ಈ ನಾಟಕದಲ್ಲಿ ಮುಖಾಮುಖಿಯಾಗುತ್ತವೆ – ಪ್ರೀತಿ ಮತ್ತು ಆಯ್ಕೆ, ವ್ಯಾಪಾರ ಮತ್ತು ಹಣದ ಸಂಬಂಧ ಹಾಗೂ ಕ್ರಿಶ್ಚಿಯನ್ ಮತ್ತು ಯಹೂದಿಗಳ ನಡುವಿನ ಜನಾಂಗದ್ವೇಷ. ಇಂಥ ಸಂಘರ್ಷಗಳ ಮುಖಾಮುಖಿಯನ್ನು ಅಸಾಧಾರಣ ನಾಟಕೀಯತೆಯೊಂದಿಗೆ ಪ್ರಸ್ತುತ ಪಡಿಸುವ ಈ ನಾಟಕವು ಅಂಥದೇ ಸಂಘರ್ಷಗಳಿಗೆ ಎದುರಾಗಿರುವ ಇವತ್ತಿನ ಜಾಗತಿಕ ಗತಿ-ಸ್ಥಿತಿಗಳಿಗೆ ಕೂಡಾ ಕನ್ನಡಿ ಹಿಡಿಯಬಲ್ಲಂಥದು.

ಹಿಂದೊಮ್ಮೆ ನೀನಾಸಮ್ ಬಳಗವು ಪ್ರಯೋಗಿಸಿದ್ದ ಈ ಕೃತಿಯನ್ನು ಈಗ ತಿರುಗಾಟವು ತುಂಬ ಬೇರೆಯದೇ ರೂಪದಲ್ಲಿ ಪ್ರಸ್ತುತಪಡಿಸುತ್ತಿದೆ.

**ಸಂಜೆ ೭ ಗಂಟೆಗೆ**

not to be
printed

Page 2

**ಅಕ್ಟೋಬರ್ ೫ ಸೋಮವಾರ**

photo to be printed here
see cd for the photo with this file no.

**05CC09**

ತಾಲೀಮಿನ ಚಿತ್ರ

ತಿರುಗಾಟ ನಾಟಕ

## ಆಕಾಶಭೇರಿ

ಪೀಯೂಶ್ ಮಿಶ್ರಾ ಅವರ ಹಿಂದಿ ನಾಟಕ 'ಗಗನ್ ದಮಾಮಾ ಬಾಜೌ'

ಕನ್ನಡ ಅನುವಾದ: ಸಿದ್ದಲಿಂಗ ಪಟ್ಟಣಶೆಟ್ಟಿ

**ಸಂಗೀತ ಮತ್ತು ನಿರ್ದೇಶನ: ಸಂಜಯ ಉಪಾಧ್ಯಾಯ**

ಹಿಂದಿಯ ಸಮಕಾಲೀನ ನಾಟಕಕಾರ ಪೀಯೂಶ್ ಮಿಶ್ರಾ ಅವರ 'ಗಗನ್ ದಮಾಮಾ ಬಾಜೌ' ಕೃತಿಯ ಕನ್ನಡ ಅವತರಣಿಕೆ ಈ ನಾಟಕ. ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗುವುದಕ್ಕೆ ಹಿನ್ನೆಲೆಯಾಗಿ ನಡೆದ ವೈವಿಧ್ಯಮಯ ಮತ್ತು ವ್ಯಾಪಕಹೋರಾಟಗಳ ಒಂದು ಸರಣಿಯನ್ನು – ಅದರಲ್ಲಿಯೂ ಮುಖ್ಯವಾಗಿ ಭಗತ್ ಸಿಂಗ್ ಮತ್ತು ಅವರ ಅನುಯಾಯಿಗಳನ್ನು – ಕೇಂದ್ರವಾಗಿಟ್ಟುಕೊಂಡು ಈ ನಾಟಕದ ಕಥನ ನಿರೂಪಿತವಾಗಿದೆ. ಆದರೆ ಇಂಥ ಕಥನದ ಮೂಲಕ ಆ ಸಂಧಿಕಾಲದ ಇತಿಹಾಸವನ್ನು ಪುನರ್ ನಿರೂಪಣೆ ಮಾಡುವುದಷ್ಟೇ ಈ ನಾಟಕಕೃತಿಯ ಉದ್ದೇಶವಲ್ಲ. ಬದಲು, ಸ್ವಾತಂತ್ರ್ಯ ಹೋರಾಟದ ಅಂದಿನ ಸಂದರ್ಭದೊಳಗೇ ಅಡಕವಾಗಿದ್ದ ವಿಭಿನ್ನ ಬಗೆಯ ಆದರ್ಶಕಲ್ಪನೆಗಳನ್ನೂ ಮತ್ತು ಅದರ ಸಾಕ್ಷಾತ್ಕಾರಕ್ಕಾಗಿ ಆಗ ಸಂಭವಿಸಿದ ತಿಕ್ಕಾಟಗಳನ್ನೂ ಗುರುತಿಸುತ್ತ ಆ ಮೂಲಕ ಅಂಥದೇ ಇನ್ನೊಂದು ಹೋರಾಟಕ್ಕಾಗಿ ಕಾಲ ಕೂಡಿರಬಹುದಾದ ಸಮಕಾಲೀನ ಸಂದರ್ಭಗಳ ಕಡೆಗೆ ಕೂಡ ಬೆರಳು ಮಾಡುವ ಪ್ರಯತ್ನವನ್ನು ಈ ಕೃತಿ ನಡೆಸುತ್ತದೆ. ಉತ್ತರ ಭಾರತದ ಹಲವು ಜನಪ್ರಿಯ ಮತ್ತು ಜಾನಪದೀಯ ಹಾಡುಗಳನ್ನು ಕೂಡಿಸಿ ಕಟ್ಟಲಾಗಿರುವ ಸಂಗೀತಪ್ರಧಾನ ಪ್ರಯೋಗ ಇದು.

ಈ ನಾಟಕವನ್ನು ನಿರ್ದೇಶಿಸುತ್ತಿರುವ ಸಂಜಯ ಉಪಾಧ್ಯಾಯ ಅವರು ಬಿಹಾರದ ಪಟ್ನಾದವರು; ನಿರ್ಮಾಣಕಲಾಮಂಚ ಎಂಬ ರಂಗತಂಡವನ್ನು ನಡೆಸುತ್ತ ತಮ್ಮ ಸಂಗೀತಪ್ರಧಾನ ಪ್ರಯೋಗಗಳಿಗಾಗಿ ಹೆಸರಾದವರು.

**ಸಂಜೆ ೭ ಗಂಟೆಗೆ**

not to be printed
Page 3

**ಅಕ್ಟೋಬರ್ ೬ ಮಂಗಳವಾರ**

photo to be printed here
see cd for the photo with this file no.

**06CC09**

ನೀನಾಸಮ್ ನಾಟಕ

## ಆಕಾಶಬುಟ್ಟಿ

ಜಯಂತ ಕಾಯ್ಕಿಣಿ ಅವರ ಕನ್ನಡ ನಾಟಕ

**ವಿನ್ಯಾಸ ಮತ್ತು ನಿರ್ದೇಶನ: ರಘುನಂದನ**

ತಮ್ಮ ಮೂರು ಪ್ರಕಟಿತ ಕಥೆಗಳನ್ನು ಆಧಾರವಾಗಿಟ್ಟುಕೊಂಡು, ಅವುಗಳನ್ನು ಕೂಡಿಸಿ ಸ್ವತಃ ಜಯಂತ ಕಾಯ್ಕಿಣಿಯವರೇ ರಚಿಸಿದ ಈಚಿನ ಕನ್ನಡ ನಾಟಕ 'ಆಕಾಶಬುಟ್ಟಿ'. ಕಾಯ್ಕಿಣಿಯವರ 'ಆಕಾಶಬುಟ್ಟಿ', 'ಅಂತಃಪುರದೊಳಗೆ' ಮತ್ತು 'ಮಿಥುನ್ ನಂಬರ್ ೨' – ಈ ಮೂರು ಕಥೆಗಳು ಇಲ್ಲಿ ಸಮಾಗಮಗೊಂಡಿವೆ. ಮೊದಲನೆಯದು ಮುಂಬಯಿಗೆ ಬಂದು ನೆಲೆಸಿ ಅಲ್ಲಿಯ ಕೆಳಮಧ್ಯಮವರ್ಗದ ಚಾಳ್‌ನಲ್ಲಿ ಕಷ್ಟದಿಂದ ಬದುಕು ಸಾಗಿಸುತ್ತಿರುವ ಕುಟುಂಬದ ಕಥೆ; ಎರಡನೆಯದು ಅಂಥದೇ ವರ್ಗದ ದಂಪತಿಗಳ ಬದುಕಿನಲ್ಲಿ ಹೊಸ 'ಒಡನಾಡಿ'ಯೊಬ್ಬಳು ಪ್ರವೇಶ ಮಾಡಿದ ಕಥೆ ಮತ್ತು ಮೂರನೆಯದು ಸಿನೆಮಾ ನಟನಾಗುವ ಕನಸು ಹೊತ್ತು ಪುಟ್ಟ ಊರಿನಿಂದ ಮುಂಬಯಿಗೆ ಬಂದು ಇಲ್ಲಿ ಪ್ರಸಿದ್ಧ ನಟನೊಬ್ಬನಿಗೆ 'ಬದಲಿ'ಯಾಗಿ ಕೆಲಸ ಮಾಡುತ್ತಿರುವ ಯುವಕನೊಬ್ಬನ ಕಥಾನಕ. ಈ ಮೂರೂ ಕಥೆಗಳನ್ನು ಕೂಡಿಸಿಕಟ್ಟುವ ಮೂಲಕ ಈ ನಾಟಕವು ಮುಂಬಯಿ ಎಂಬ ಮಾಯಾಲೋಕವನ್ನು ಕುರಿತ ಸಂಕೀರ್ಣ ಚಿತ್ರವೊಂದನ್ನು ನಮ್ಮೆದುರಿಗಿಡುತ್ತದೆ – ಇದರಲ್ಲಿ ಕಷ್ಟಕಾರ್ಪಣ್ಯಗಳಿರುವಂತೆಯೇ ಜೀವನೋತ್ಸಾಹವೂ ಇದೆ; ನಿರಾಶೆಗಳ ಮಡುವಿನಲ್ಲಿಯೇ ಮನುಷ್ಯಚೇತನ ಸೆಲೆಯೊಡೆಯುವುದನ್ನೂ ಈ ನಾಟಕವು ದಾಖಲಿಸುತ್ತದೆ.

ಪ್ರಸಿದ್ಧ ನಿರ್ದೇಶಕ ರಘುನಂದನ ಅವರು ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗದ ಸದಸ್ಯರೊಡನೆ ಕೂಡಿ ಕಟ್ಟಿದ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be printed
Page 4

**ಅಕ್ಟೋಬರ್ ೭ ಬುಧವಾರ**

photo to be printed here
see cd for the photo with this file no.

**07aCC09**

ಕರ್ನಾಟಕ ಸಂಗೀತ ಗಾಯನ

## ವಿ| ಹೆಮ್ಮಿಗೆ ಎಸ್. ಪ್ರಶಾಂತ್

**ಬೆಂಗಳೂರು**

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಈಚೆಗೆ ಕಾಣಿಸಿಕೊಳ್ಳುತ್ತಿರುವ ಹಲವು ಯುವಕಲಾವಿದರ ಪೈಕಿ ಪ್ರಮುಖರಲ್ಲೊಬ್ಬರು ಹೆಮ್ಮಿಗೆ ಎಸ್. ಪ್ರಶಾಂತ್. ಮೂಲತಃ ಹಾಸನ ಜಿಲ್ಲೆಯವರಾದ ಪ್ರಶಾಂತ್ ಅವರು ತಮ್ಮ ಎಳನೆಯ ವರ್ಷದಿಂದಲೇ ಸಂಗೀತಾಭ್ಯಾಸವನ್ನು ಆರಂಭಿಸಿದ್ದು ವಿ| ಬಿ.ಎಸ್. ರಾಧಾಕೃಷ್ಣನ್, ವಿ| ಪಾಲ್ಘಾಟ್ ಕೆ.ಎಸ್. ನಾರಾಯಣಸ್ವಾಮಿ ಮತ್ತು ವಿ| ಪದ್ಮಾ ನಾರಾಯಣಸ್ವಾಮಿ ಅವರುಗಳಿಂದ ಸಂಗೀತಶಿಕ್ಷಣ ಪಡೆದಿದ್ದಾರೆ.

ಕಳೆದ ಹತ್ತು ವರ್ಷಗಳಿಂದೀಚೆಗೆ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಹಲವು ಪ್ರಸಿದ್ಧ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡುತ್ತ ಬಂದಿರುವ ವಿ| ಪ್ರಶಾಂತ್ ಅವರು ಆಕಾಶವಾಣಿಯ ಮಾನ್ಯತೆ ಪಡೆದ ಕಲಾವಿದರೂ ಹೌದು. ಚೆನ್ನೈನ ಮ್ಯೂಸಿಕ್ ಅಕಾಡೆಮಿ, ಶ್ರೀಕೃಷ್ಣ ಗಾನಸಭಾ, ನಾದೋಪಾಸನ ಮತ್ತು ಬೆಂಗಳೂರಿನ ತಿರುನಾರಾಯಣ ಟ್ರಸ್ಟ್, ಪರ್ಕಸಿವ್ ಆರ್ಟ್ಸ್ ಸೆಂಟರ್, ಅನನ್ಯ ಯುವಸಂಗೀತೋತ್ಸವ, ದೇವಗಿರಿ ಸಂಗೀತಸಭಾ ಮೊದಲಾದ ಹಲವಾರು ಪ್ರತಿಷ್ಠಿತ ಸಂದರ್ಭಗಳಲ್ಲಿ ಇವರ ಸಂಗೀತ ಕಾರ್ಯಕ್ರಮಗಳು ನಡೆದಿವೆ. ಇವರ ಸಂಗೀತ ಕಾರ್ಯಕ್ರಮಗಳಿಗೆ ಮಾಧ್ಯಮಗಳಿಂದ ಮತ್ತು ಕಲಾಸಕ್ತರಿಂದ ಉತ್ತಮ ಪ್ರತಿಕ್ರಿಯೆ ದೊರಕಿದ್ದು ಈಗಾಗಲೇ ಹಲವು ಯುವ ಪುರಸ್ಕಾರಗಳೂ ಇವರಿಗೆ ದೊರಕಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ವಿ| ಹೆಮ್ಮಿಗೆ ಎಸ್. ಪ್ರಶಾಂತ್ ಅವರೊಡನೆ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀ ಮತ್ತೂರು ಶ್ರೀನಿಧಿ (ವಯೋಲಿನ್) ಮತ್ತು ಶ್ರೀ ಬಿ.ಆರ್. ಶ್ರೀನಿವಾಸ್ (ಮೃದಂಗಮ್).

**ಸಂಜೆ ೭ ಗಂಟೆಗೆ**

not to be
printed
↓
Page 5

## ಅಕ್ಟೋಬರ್ ೭ ಬುಧವಾರ

photo to be printed here
see cd for the photo with this file no.
↓
**07bCC09**

ಕರ್ನಾಟಕ ಸಂಗೀತ ವೀಣಾವಾದನ

### ವಿ। ಶುಭಾ ಸಂತೋಷ್

**ಬೆಂಗಳೂರು**

ಮತ್ತು ಸಹಕಲಾವಿದರಿಂದ

ಕಿರಿವಯಸ್ಸಿನಲ್ಲಿಯೇ ಶ್ರೀ ಶ್ರೀನಿವಾಸಮೂರ್ತಿ ಆಚಾರ್ ಅವರಿಂದ ವೀಣೆಯ ಅಭ್ಯಾಸವನ್ನು ಆರಂಭಿಸಿದ ವಿ। ಶುಭಾ ಸಂತೋಷ್ ಅವರು ಪ್ರಸ್ತುತ ಗುರು ವಿ। ಸುಧಾ ವಾದಿರಾಜ್ ಅವರಿಂದ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಹಲವು ವರ್ಷಗಳ ಅಭ್ಯಾಸ ಮತ್ತು ಪರಿಶ್ರಮದ ಬಳಿಕ ಅವರೀಗ, ಕಳೆದ ಮೂರ್‍ನಾಲ್ಕು ವರ್ಷಗಳಿಂದ, ಸಂಪೂರ್ಣವಾಗಿ ಸಂಗೀತಾಭ್ಯಾಸ-ಪ್ರಯೋಗಗಳಲ್ಲೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ; ವೀಣೆಯಲ್ಲಿ ವಿಶೇಷವನ್ನು ಸಾಧಿಸುವ ಹಂಬಲದಿಂದ ಉದ್ಯುಕ್ತರಾಗಿದ್ದಾರೆ.

ಈಚಿನ ವರ್ಷಗಳ ಹಲವಾರು ಪ್ರತಿಷ್ಠಿತ ಉತ್ಸವಗಳಲ್ಲಿ ಇವರ ವೀಣಾವಾದನ ಕಛೇರಿಗಳು ನಡೆದಿವೆ; ಆಕಾಶವಾಣಿಯ ಮಾನ್ಯತೆಯೂ ಇವರಿಗೆ ದೊರಕಿದೆ. ರಾಜ್ಯ-ಕೇಂದ್ರ ಸರ್ಕಾರದ ಶಿಷ್ಯವೇತನವೇ ಅಲ್ಲದೆ ಗಾಯನ ಸಮಾಜದ ಉತ್ತಮ ವಾದಕಿ ಪ್ರಶಸ್ತಿ, ಚೆನ್ನೈನ ನಾರದ ಗಾನಸಭಾದಿಂದ ಲಲಿತಾ ಪದ್ಮನಾಭನ್ ಪ್ರಶಸ್ತಿ, ಅನನ್ಯದಿಂದ ಅನನ್ಯಪ್ರತಿಭೆ ಪುರಸ್ಕಾರ, ಸುಬ್ಬರಾಮಯ್ಯ ಟ್ರಸ್ಟಿನಿಂದ ಸಂಗೀತಕೌಸ್ತುಭ ಪ್ರಶಸ್ತಿಗಳು ಇವರಿಗೆ ದೊರಕಿವೆ. ವಿ। ಸುಧಾ ವಾದಿರಾಜ್ ಅವರೊಂದಿಗೆ ಕೂಡಿ ಇವರು 'ವೀಣಾಕಂಪನ' ಎಂಬ ಧ್ವನಿಮುದ್ರಣವನ್ನೂ ಹೊರತಂದಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ವಿ। ಶುಭಾ ಸಂತೋಷ್ ಅವರೊಡನೆ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀಮತಿ ರಂಜನಿ ವೆಂಕಟೇಶ್ (ಮೃದಂಗಮ್) ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀ ಕೆ. ಕೃಷ್ಣ (ಮೋರ್ಚಿಂಗ್).

**ಸಂಜೆ ೮.೩೦ ಗಂಟೆಗೆ**

not to be
printed
↓
Page 6

## ಅಕ್ಟೋಬರ್ ೮ ಗುರುವಾರ

photo to be printed here
see cd for the photo with this file no.
↓
**08CC09**

ಮರಾಠಿ ಕೀರ್ತನೆ ಮತ್ತು ನಾಟ್ಯಸಂಗೀತ

### ಶ್ರೀ ಚಾರುದತ್ತ ಆಫಳೆ

ಮತ್ತು ಸಹಕಲಾವಿದರಿಂದ

ಮಹಾರಾಷ್ಟ್ರದ ಶ್ರೀಮಂತ ರಂಗಸಂಪ್ರದಾಯದ ಅತ್ಯಂತ ಪ್ರಮುಖ ವಿಶೇಷ ನಾಟ್ಯಸಂಗೀತ; ಮತ್ತು ಅದರೊಂದಿಗೇ ಬೆಳೆದ ಕೀರ್ತನೆ (ಕರ್ನಾಟಕದ ಹರಿಕಥೆಯ ಮಾದರಿಯದ್ದು). ಇವೆರಡನ್ನೂ ನಮ್ಮಲ್ಲಿ ಪರಿಚಯಿಸುವ ಉದ್ದೇಶದಿಂದ ಈ ವಿಶೇಷ ಕಾರ್ಯಕ್ರಮವನ್ನು ಯೋಜಿಸಲಾಗಿದೆ.

ಕಲಾವಿದ ಶ್ರೀ ಚಾರುದತ್ತ ಗೋವಿಂದಸ್ವಾಮಿ ಆಫಳೆಯವರು ಕೀರ್ತನೆಯನ್ನು ಸಾಂಪ್ರದಾಯಿಕವಾಗಿ ರೂಢಿಸಿಕೊಂಡ ಕುಟುಂಬದವರು; ಚಿಕ್ಕಂದಿನಿಂದಲೂ ನಾಟಕಗಳಲ್ಲಿ ಪಾತ್ರವಹಿಸಿ ನಾಟ್ಯಸಂಗೀತದಲ್ಲಿ ಪ್ರವೀಣರಾದವರು. ಸಂಗೀತದಲ್ಲಿ ಎಂ.ಎ. ಪದವಿ ಪಡೆದು ಆ ಕ್ಷೇತ್ರದ ಹಲವು ದಿಗ್ಗಜರಿಂದ ಮಾರ್ಗದರ್ಶನ ಪಡೆದಿರುವ ಇವರು ಮರಾಠಿ ಭಾಷೆಯ ಸುಪ್ರಸಿದ್ಧ ಕೃತಿಗಳಾದ 'ಸಂಗೀತ ಶಾಕುಂತಲ', 'ಸಂಗೀತ ಸೌಭದ್ರಾ', 'ಸಂಶಯ ಕಲ್ಲೋಳ', 'ಮಾನಾಪಮಾನ್' – ಮೊದಲಾದ ನಾಟಕಪ್ರಯೋಗಗಳಲ್ಲಿ ಮುಖ್ಯಭೂಮಿಕೆಗಳನ್ನು ವಹಿಸಿದ್ದಾರೆ. ಮಾಸ್ಟರ್ ದೀನಾನಾಥ್ ಪುರಸ್ಕಾರವೂ ಸೇರಿ ಹಲವು ಪ್ರಶಸ್ತಿಗಳಿಗೆ ಪಾತ್ರರಾಗಿರುವ ಇವರು ಮುಂಬಯಿ, ಪುಣೆಗಳಲ್ಲದೆ ದಿಲ್ಲಿ, ಕಲ್ಕತ್ತಾ, ಬೆಂಗಳೂರು ಸೇರಿದಂತೆ ಭಾರತಾದ್ಯಂತ ಹಲವೆಡೆ ಕಾರ್ಯಕ್ರಮ ನೀಡಿದ್ದಾರೆ; ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾಗಳಲ್ಲೂ ಪ್ರದರ್ಶನ ಕೊಟ್ಟಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಹಕಲಾವಿದರು – ಶ್ರೀ ರೇಶಿಮ್ ಮರಕಳೆ (ಹಾರ್ಮೋನಿಯಂ), ಶ್ರೀ ಮಿಲಿಂದ ತಾಯವಾಡೆ (ತಬಲಾ) ಮತ್ತು ಶ್ರೀ ನಂದಕುಮಾರ್ ಭಾಂಡವಾಲಕರ್ (ಮೃದಂಗ).

**ಸಂಜೆ ೭ ಗಂಟೆಗೆ**

not to be
printed
Page 7

**ಅಕ್ಟೋಬರ್ ೯ ಶುಕ್ರವಾರ**

photo to be printed here
see cd for the photo with this file no.

**09CC09**

ಹಿಂದುಸ್ತಾನಿ ಗಾಯನ

## ಪಂ। ಪರಮೇಶ್ವರ ಹೆಗಡೆ

ಮತ್ತು ಸಹಕಲಾವಿದರಿಂದ

ಕರ್ನಾಟಕದಲ್ಲಿ ಪ್ರಸ್ತುತ ಹಿಂದುಸ್ತಾನಿ ಸಂಗೀತಕ್ಷೇತ್ರದ ಮುಂಚೂಣಿಯ ಗಾಯಕರೊಲ್ಲೊಬ್ಬರಾಗಿರುವ ಪಂ। ಪರಮೇಶ್ವ ಹೆಗಡೆ ಅವರಲ್ಲಿ ಕಿರಾಣಾ, ಗ್ವಾಲಿಯರ್ ಮತ್ತು ಪಟಿಯಾಲಾ ಘರಾನಾಗಳ ಸಂಗೀತ ಶೈಲಿಗಳು ಅವರದೇ ಅನನ್ಯ ಛಾಪಿನೊಂದಿಗೆ ಸಹಯೋಗಗೊಂಡಿವೆ.

ಉತ್ತರ ಕನ್ನಡ ಜಿಲ್ಲೆಯ ಪುಟ್ಟ ಹಳ್ಳಿಯೊಂದರಲ್ಲಿ ಜನಿಸಿ ತಮ್ಮ ಹತ್ತನೆಯ ವಯಸ್ಸಿಗೇ ಸಂಗೀತಾಭ್ಯಾಸ ಆರಂಭಿಸಿದ ಪಂ। ಹೆಗಡೆಯವರು ಮೊದಲು ಶ್ರೀ ಎಸ್.ಎಂ. ಭಟ್ ಮತ್ತು ಪಂ। ಚಂದ್ರಶೇಖರ ಪುರಾಣಿಕಮಠ ಅವರಿಂದ ಮಾರ್ಗದರ್ಶನ ಪಡೆದರು; ಬಳಿಕ ಒಂದೂವರೆ ದಶಕ ಕಾಲ ಹಿಂದುಸ್ತಾನಿ ದಿಗ್ಗಜ ಪಂ। ಬಸವರಾಜ ರಾಜಗುರು ಅವರ ಶಿಷ್ಯರಾಗಿದ್ದರು. ಪುಣೆಯ ಪ್ರತಿಷ್ಠಿತ ಸವಾಯಿಗಂಧರ್ವ ಉತ್ಸವದಿಂದ ಮೊದಲುಗೊಂಡು ದೇಶಾದ್ಯಂತ ಹಲವೆಡೆ ಇವರು ಬಹುಸಂಖ್ಯೆಯ ಕಾರ್ಯಕ್ರಮಗಳನ್ನು ನೀಡಿದ್ದಾರೆ; ಆಕಾಶವಾಣಿ ದೂರದರ್ಶನಗಳಲ್ಲೂ ಹಾಡಿದ್ದಾರೆ; ಅಮೇರಿಕಾ, ಕೆನಡಾ, ಇಂಗ್ಲೆಂಡ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಹಲವು ಕಾರ್ಯಕ್ರಮ ನೀಡಿದ್ದಾರೆ. ಹಲವು ಪ್ರಮುಖ ಪ್ರಶಸ್ತಿ-ಪುರಸ್ಕಾರಗಳು ಇವರಿಗೆ ಸಂದಿವೆ; ಇವರ ಸಂಗೀತದ ಹಲವು ಧ್ವನಿಮುದ್ರಣಗಳು ಹೊರಬಂದಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಪಂ। ಹೆಗಡೆ ಅವರು ತಮ್ಮ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡುವ ಜತೆಗೆ ಟಿವಿ ಧಾರಾವಾಹಿ-ಚಲನಚಿತ್ರಗಳಿಗೆ ಕೂಡಾ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಹಕಲಾವಿದರು – ಶ್ರೀ ಗೋಪಾಲಕೃಷ್ಣ ಹೆಗಡೆ (ತಬಲಾ) ಮತ್ತು ಶ್ರೀ ಗೌರೀಶ ಯಾಜಿ (ಹಾರ್ಮೋನಿಯಮ್).

**ಸಂಜೆ ೭ ಗಂಟೆಗೆ**

not to be
printed
Page 8

**ಅಕ್ಟೋಬರ್ ೧೦ ಶನಿವಾರ**

photo to be printed here
see cd for the photo with this file no.

**10CC09**

ಶಾಸ್ತ್ರೀಯ ನೃತ್ಯ

## ಭರತಾಂಜಲಿ

ಗುರು ವಿ। ಬಿ. ಭಾನುಮತಿ ಅವರ ನೃತ್ಯಕಲಾಮಂದಿರಮ್,
ಬೆಂಗಳೂರು – ತಂಡದ ಕಲಾವಿದರಿಂದ

ಕಳೆದ ೨೮ ವರ್ಷಗಳಿಂದ ಬೆಂಗಳೂರಿನಲ್ಲಿ ನೃತ್ಯಕಲಾಮಂದಿರಮ್ ಎಂಬ ಶಾಲೆಯನ್ನು ನಡೆಸುತ್ತ ಅಲ್ಲಿ ೬೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿರುವುದಲ್ಲದೆ, ದೇಶಾದ್ಯಂತ ಪ್ರವಾಸ ಮಾಡಿ ೨೦೦೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿರುವ ಸಾಧನೆ ಗುರು ವಿ। ಬಿ. ಭಾನುಮತಿ ಅವರದು. ಪ್ರಸ್ತುತ ಪ್ರಯೋಗ ಆ ತಂಡದ ಆಯ್ದ ಕಲಾವಿದರದ್ದು.

ಸುಪ್ರಸಿದ್ಧ ಗುರುಗಳಾದ ವಿ। ಕೆ.ಎನ್. ದಂಡಾಯುಧಪಾಣಿ ಪಿಳ್ಳೆ, ವಿ। ಕೆ. ವೆಂಕಟಲಕ್ಷ್ಮಮ್ಮ, ವಿ। ಕಲಾನಿಧಿ ನಾರಾಯಣನ್ ಮೊದಲಾದವರಿಂದ ನೃತ್ಯದೀಕ್ಷೆ ಪಡೆದ ವಿ। ಭಾನುಮತಿ ಅವರು ಕಳೆದ ಕಾಲು ಶತಮಾನಕ್ಕೂ ಮಿಕ್ಕಿದ ಅವಧಿಯಲ್ಲಿ ಹತ್ತಾರು ನೃತ್ಯನಾಟಕಗಳನ್ನು ಸಿದ್ಧಪಡಿಸಿದ್ದಾರೆ. ಅದರಲ್ಲಿ ತುಂಬ ಜನಪ್ರಿಯವಾಗಿ ೭೦೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿರುವ ಕೃತಿ ‘ಭರತಾಂಜಲಿ’; ಭರತನಾಟ್ಯ ಪ್ರಕಾರದ ಹಲವಾರು ವೈಶಿಷ್ಟ್ಯಗಳನ್ನು ಒಂದು ಸೂತ್ರದಲ್ಲಿ ಜೋಡಿಸಿರುವ ಪ್ರಯೋಗ ಇದು.

ವಿ। ಬಿ. ಭಾನುಮತಿ ಅವರ ಈ ತಂಡವು ಪುರಾನಾ ಕಿಲಾದ ಅನನ್ಯ ಉತ್ಸವ, ಕೋಣಾರ್ಕದ ನೃತ್ಯೋತ್ಸವ ಮತ್ತು ಹಂಪಿ-ಬಾದಾಮಿ-ಪಟ್ಟದಕಲ್ಲು ಮೊದಲಾದ ಕರ್ನಾಟಕದ ಉತ್ಸವಗಳೂ ಸೇರಿದಂತೆ ದೇಶದ ಪ್ರತಿಷ್ಠಿತ ಉತ್ಸವಗಳಲ್ಲಿ ಪ್ರದರ್ಶನ ನೀಡಿದೆ; ಯುರೋಪು ಅಮೇರಿಕಾ ಕೂಡಿದಂತೆ ಹಲವು ಬಾರಿ ಇವರ ತಂಡವು ವಿದೇಶಗಳಲ್ಲಿಯೂ ಪ್ರದರ್ಶನ ಕೊಟ್ಟಿದೆ. ಕಲಾಶ್ರೀ ಪ್ರಶಸ್ತಿ ಮತ್ತು ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗಳು ಸೇರಿದಂತೆ ಹಲವು ಪುರಸ್ಕಾರಗಳು ವಿ। ಭಾನುಮತಿ ಅವರಿಗೆ ದೊರಕಿವೆ.

**ಸಂಜೆ ೭ ಗಂಟೆಗೆ**